'ಅಪ್ಪಗೋಳ, ನೀವು ಇಲ್ಲೇ ಪಲ್ಲಂಗದ ಮ್ಯಾಗ ಮಕ್ಕೊಂಡಿದ್ರಿ. ನಾನು ಕೋಣೆ ಹೊರಗೆ ಬಾಗಿಲಿಗೆ ತಲೆಯಿಟ್ಟು ಮಲಗಿದ್ದೆ. ನೀವು ಏನೇನೋ ಅಂದ್ಕೊಂತ ಚಟ್ಟನೆ ಚೀರಿದಂಗಾತು. ಆಗ್ಲೇ, ಆ ವಿಕಾರ ದನಿ ಕೇಳಿ ನನ್ನ ಹೆದರಿಕ್ಯಾಗಿ ಎದ್ದು ಬಂದೆ...' ಎಂದು ಅವರಿಗೆ ಹೇಳಿದ. ಹಾಗೆ, 'ತಡೀರಿ, ಸಣ್ಣ ಅಪ್ಪಗೋಳ್ಗಿ ಫೋನ್ ಮಾಡ್ತೀನಿ...' ಎನ್ನುತ್ತ ಪಲ್ಲಂಗದ ಪಕ್ಕದಲ್ಲಿದ್ದ ಲ್ಯಾಂಡ್ ಫೋನಿನಿಂದ ಅವರ ಮೊಬೈಲಿಗೆ ಫೋನ್ ಮಾಡಿ, 'ಗಂಗಾಧರಯ್ಯಸ್ವಾಮಿಗಳು ಹೆಂಗೆಗರೆ ಮಾಡಾಕತ್ತ್ಯಾರು! ನೀವು ಜಲ್ದಿ ಬರ್ರಿ...' ಎಂದು ಸುದ್ದಿ ಮುಟ್ಟಿಸಿದ. ಆಗ, ಮಠದಿಂದ ತುಸು ದೂರದಲ್ಲಿದ್ದ ಇನ್ನೊಂದು ಕೋಣೆಯಲ್ಲಿ ಮಲಗಿದ್ದ ಪಂಚಯ್ಯಸ್ವಾಮಿಗಳು ನಿದ್ದೆಗಣ್ಣಿನಲ್ಲಿಯೇ ಗಡಬಡಿಸಿ ಎದ್ದು ಬಡಬಡನೆ ಹೆಜ್ಜೆ ಹಾಕುತ್ತ, ಗಂಗಾಧರಯ್ಯಸ್ವಾಮಿಗಳ ವಿಶ್ರಾಂತಿ ಕೋಣೆಯತ್ತ ಬರುತ್ತಲೇ, 'ಯಾನಾತು?, ಯಾನಾತು?, ಅಪ್ಪಗೋಳ್ಗಿ ಉರಿ ಏನರೆ ಬಂದಾವೇನು?' ಎನ್ನುತ್ತ ಒಳಗೆ ಬಂದರು. ಪಂಚಯ್ಯಸ್ವಾಮಿಗಳ ಆ ದನಿಯನ್ನು ಕೇಳಿ ಎಚ್ಚೆತ್ತ ಗಂಗಾಧರಯ್ಯಸ್ವಾಮಿಗಳು ಕುಂತಲ್ಲೇ ಮಿಸುಕಾಡಿದರು. ಹಾಗೇ ಪಂಚಯ್ಯಸ್ವಾಮಿಗಳ ಮಾರಿಯ ಮೇಲೆ ಕಣ್ಣುಗಳನ್ನು ನೆಟ್ಟು ನಿಧಾನವಾಗಿ ಸಮಾಧಾನ ಹೊಂದಿದರು. ಯಾಕೇನೋ ಆ ಗಳಿಗೆಯಲ್ಲಿ ಅವರ ಮೈ ಬೆವರಿ ನೀರೊಡೆಯುತ್ತಿತ್ತು.

'ಪಂಚಯ್ಯ, ನಿದ್ದಿ ಬಂದಂಗಾಗಿ ಕಣ್ಣು ಮುಚ್ಚಿದೆ. ಹಂಗs ಕನಸು ಬಿತ್ತು. ಮಟ ಮಟ ಮಧ್ಯಾಹ್ನದ ಹೊತ್ತಾಗಿತ್ತು. ರಣ... ರಣ... ಅಂತ ಬಿಸಿಲು ಬಿದ್ದಿತ್ತು. ಆ ಬಿಸುಲಾಗ ನಾನು ಮಠದ ಮುಂದಿನ ಆಲದ ಗಿಡದ ಕೆಳಗೆ ಕುಂತಿದ್ದೆ. ನೆಲದ ತುಂಬ ಆಲದ ಗಿಡದ ನೆಳ್ಳು ಬಿದ್ದಿತ್ತು. ನಡುನಡುಕ ತಂಪು ಗಾಳಿ ಬೀಸಾಕತ್ತಿತ್ತು. ಅದs ವ್ಯಾಳ್ಯೇದಾಗ ಅದೆಲ್ಲಿಂದಲೋ ಏನೋ ನನ್ನ ಎದ್ಯಾಗ ಅಧ್ಯಾತ್ಮದ ದೀಪ ಹಚ್ಚಿದ ಗುರು ರಾಚಯ್ಯಸ್ವಾಮಿಗಳು ಸಾವಕಾಶವಾಗಿ ಹೆಜ್ಜೆ ಹಾಕ್ಕೊಂತ ಬಂದು ನನ್ನ ಮುಂದೆ ನಿಂತಂಗಾತು! ಆಗ ಅವ್ರ ಮುಖದಾಗ ಸಂತಸದ ಕಳೆಯಿತ್ತು. ಎರಡೂ ಕಣ್ಣಿನ್ಯಾಗ ಎಂಥದೋ ಬೆಳಕಿತ್ತು! ಅವ್ರು ನನ್ನ ನೋಡಿ ನಕ್ಕಂಗ ಮಾಡಿದ್ರು. ಹಂಗs ಒಂದ್ಹೆಜ್ಜೆ ಮುಂದೆ ಬಂದು, 'ಗಂಗಾಧರಯ್ಯ...' ಎಂದು ತಲೆ ನೇವರಿಸುತ್ತ ಗಳಿಗೊತ್ತು ನನ್ನನ್ನೇ ನೋಡುತ್ತ ನಿಂತರು. ಅಷ್ಟೇ..., ಆಮ್ಯಾಲೆ ಅವ್ರಿಗೆ ಏನನ್ನಿಸಿತೋ ಏನೋ ಸರಕ್ಕನೆ ಹೊರಳಿ ಬಂದ ದಾರಿಯಲ್ಲಿಯೇ ಹೊಂಟರು. ಆದ್ರ ಅವ್ರು ಹಂಗ ಹೊಂಟು ನಿಂತಾಗ ನನ್ಗೂ ಅವ್ರ ಕೂಡ ಹೋಗ್ಬೇಕು ಅಂತ ಅನ್ನಿಸ್ಲಿಕತ್ತಿತು. ಆಗಲೇ, 'ಯಪ್ಪ, ತಂದೆ, ನನ್ನ ಬಿಟ್ಟು ಹೋಗ್ಬ್ಯಾಡ ನಿಂದ್ರು... ನಿನ್ನ ಕೂಡ ನಾನೂ ಬರತೀನಿ...' ಅಂತ ಚೀರಕೊಂತ ಎದ್ದು ಕುಂತೆ ಎಂದು ಸುಧಾರಿಸಿಕೊಂಡು ಹೇಳಿದರು.

ಅವರ ಮಾತುಗಳನ್ನು ಕೇಳಿ ಪಂಚಯ್ಯಸ್ವಾಮಿಗಳಿಗೆ ಸಂಕಟವಾಗಿ ನಿಟ್ಟುಸಿರು ಬಿಡುವಂತಾಯಿತು. ಅದೇ ಸಂಕಟದಲ್ಲಿ ಅವರು ಗಂಗಾಧರಯ್ಯಸ್ವಾಮಿಗಳ ಪಕ್ಕದಲ್ಲಿ ಬಂದು ಕುಂತು, 'ಅಪ್ಪಗೋಳ, ನೀವು ಹಿಂಗೆಲ್ಲ ಅರುವು ಮರುವು ಹಾರಿದಂಗ ಮಾಡ್ಲಿಕತ್ತಿರೆಂದ್ರ ನಮ್ಗ ಭಾಳs ಸಂಕ್ಟ ಆಗ್ತೈತಿ. ನಿಮ್ಮನ್ನು ಬಿಟ್ರ ನಮಗ ಆಗ್ಲಿ, ಈ ಮಠಕ್ಕ ಆಗ್ಲಿ ದಿಕ್ಕರೆ ಯಾರದಾರು? ನೀವು ಎಲ್ಲರೆ ಕೈಬಿಟ್ಟು ಹೋದಿರೆಂದ್ರ ನಮ್ಮನ್ನು ಹಿಡ್ದು ಈ ಮಠಕ್ಕೆ ನಡ್ಕೊಳ್ಳೊ ಭಕ್ತರೆಲ್ಲ ಸೇರಿನs ಪರದೇಶಿ ಆಕ್ಕೀವಿ. ಅದಕ್ಕs, ನೀವು ನಮ್ಮ ಕೈಬಿಟ್ಟು ಹೋಗಬಾರದು. ನೀವು ಯಾವಾಗ್ಲೂ ನಮ್ಗ ಆಸ್ರ ಆಗಿ ಇರಬೇಕು...' ಎನ್ನುತ್ತ ತಮ್ಮ ತೊಡೆಯ ಮೇಲೆ ಅವರನ್ನು ಮಲಗಿಸಿಕೊಂಡು ಕಣ್ಣಿಗೆ ನೀರು ತಂದರು. ಪಂಚಯ್ಯಸ್ವಾಮಿಗಳು ಹೀಗೆ ಕಣ್ಣಿಗೆ ನೀರು ತಂದದ್ದನ್ನು ಕಂಡು ಮಾರುತಿ, 'ನಿಮ್ಗ ಏನೂ ಆಗಿಲ್ಲ! ಧೈರ್ಯಲೇ ಇರ್ರಿ. ಏನೇನೂ ಆಗಂಗಿಲ್ಲ. ನೀವು ಹಿಂಗ ಮಾಡಿರೆಂದ್ರ ನಾವು ಕಾಲು ಕಳ್ಕೊಂತೀವಿ...' ಎಂದು ಮೂಗೇರಿಸಿ ಅಳತೊಡಗಿದ.

ಆಗ, ಗಂಗಾಧರಯ್ಯಸ್ವಾಮಿಗಳೇ ಅಳಬ್ಯಾಡ್ರಿ ಎನ್ನುವಂತೆ ಅವರಿಗೆ ಕಣ್ಣೀಲೆ ಸನ್ನೆ ಮಾಡಿ ಹೇಳಿದರು.

ಹೊರಗೆ ಇನ್ನೂ ಕತ್ತಲಿತ್ತು. ಕೋಣೆಯೊಳಗಿನ ಝೀರೋ ಬಲ್ಬಿನ ಮಂದ ಬೆಳಕಿನಲ್ಲಿ ಪಲ್ಲಂಗದ ಸುತ್ತ ನೊರಜುಗಳು ಸೊಂಯ್s... ಎಂದು ಸದ್ದು ಹೊರಡಿಸಿ ಹಾರಾಡುತ್ತಿದ್ದವು. ತೊಡೆಯ ಮೇಲೆ ತಲೆಯಿಟ್ಟು ಮಲಗಿದ್ದ ತನ್ನ ಪಾಲಿನ ದೇವರನ್ನು ಕಂಡು ಪಂಚಯ್ಯಸ್ವಾಮಿಗಳಿಗೆ ಕೆಡಕೆನಿಸಿತು. ಅವರು ಕಣ್ಮುಚ್ಚಿ ಕುಂತರು.

...ಗಂಗಾಧರಯ್ಯಸ್ವಾಮಿಗಳ ದೇಹದಲ್ಲಿ ಬರೀ ಎಲುಬು ತೊಗಲುಗಳಷ್ಟೇ ಉಳಿದು ಉಸುರಾಡೊ